**ದಿನಾಂಕಃ 15.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಎಮ್ ಡಿ **ವಕೀಲರಿಂದಃ**

ನಾನು ಎಮ್ ಎ, ಬಿ ಎಡ್ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ವಾದಿ ನನ್ನ ತಾಯಿ, 2 ನೇ ವಾದಿ ನನ್ನ ತಂದೆ, 3 ನೇ ವಾದಿ ನನ್ನ ಅಣ್ಣ, 5 ನೇ ವಾದಿ ನನ್ನ ತಮ್ಮ. ನಮ್ಮ ಮನೆಯ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತೇನೆ. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ಇರುವ ಮನೆಯ ಖಾತೆಯು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಜಂಜರ್ ನಂಬರ್ 715 ಆರ್ ಸಿ ಸಿ ಕಟ್ಟಡಕ್ಕೆ ಸಂಬಂಧಿಸಿದ ನಂಬರ್ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ದಕ್ಷಿಣಕ್ಕಿರುವ ನಿವೇಶನ ಸಂಖ್ಯೆ2 ನ್ನು ನನ್ನ ತಾತ ಪ್ರಕಾಶ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ನಿವೇಶನ ಸಂಖ್ಯೆ2 ನ್ನು ಪ್ರಕಾಶ್ ರವರು 5 ನೇ ವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ನಿವೇಶನ ಸಂಖ್ಯೆ2 ರ ವಿಸ್ತೀರ್ಣ ಪೂರ್ವ ಪಶ್ಚಿಮ 20 ಅಡಿ ಉತ್ತರ ದಕ್ಷಿಣ 40 ಅಡಿ ಆಗಿರುತ್ತದೆ. ಸದರಿ ಕ್ರಯ ಪತ್ರಗಳನ್ನು ಈ ದಾವೆಯಲ್ಲಿ ಹಾಜರು ಪಡಿಸಿರುತ್ತೇನೆ. ಸಾಕ್ಷಿದಾರರು ತಾವು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ನೋಡಲಾಗಿ ಸದರಿ ಕ್ರಯ ಪತ್ರಗಳನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ.

ನಮ್ಮ ಮನೆಯ ದಕ್ಷಿಣಕ್ಕೆ ಮತ್ತು ಪ್ರಕಾಶ್ ರವರ ನಿವೇಶನದ ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಮ್ಮ ಮನೆಯ ದಕ್ಷಿಣಕ್ಕೆ ಮತ್ತು ಪ್ರಕಾಶ್ ರವರ ನಿವೇಶನದ ಉತ್ತರಕ್ಕೆ ಇರುವ ರಸ್ತೆಯೇ ನಿಡಿ-1 ರಲ್ಲಿರುವ ರಸ್ತೆಯಾಗಿರುತ್ತದೆ. ನಿಡಿ-1 ರ ಬಲಭಾಗದಲ್ಲಿ ಕಟ್ಟುತ್ತಿರುವ ಮನೆಯು ಸುರೇಶ್ ರವರದ್ದಾಗಿರುತ್ತದೆ. ಸದರಿ ನಿವೇಶನವನ್ನೂ ಸಹ ನಮ್ಮ ತಾತ ಮಾರಾಟ ಮಾಡಿರುತ್ತಾರೆ. ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ನಿಡಿ-2 ರಲ್ಲಿ ಕಾಣುವ ರಸ್ತೆಯು ವಿದ್ಯಾನಗರದಿಂದ ನಂಜನಗೂಡಿನ ಮುಖ್ಯ

ರಸ್ತೆಗೆ ಸೇರುವ ದಕ್ಷಿಣ ಉತ್ತರ ರಸ್ತೆಯಾಗಿರುತ್ತದೆ. ನಿಡಿ-1 ರ ಭಾವ ಚಿತ್ರದಲ್ಲಿ ಕಾಣುವ ಅಂಗಡಿ ಮಳಿಗೆಯು 5 ನೇ ವಾದಿಗೆ ಸೇರಿದ್ದಾಗಿರುತ್ತದೆ. ಸದರಿ ಅಂಗಡಿ ಮಳಿಗೆಯು 20 X 40 ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುತ್ತದೆ. ನಿಡಿ-1 ರಲ್ಲಿ ಕಾಣುವ ರಸ್ತೆಯು ನಿಡಿ-2 ರಲ್ಲಿ ಕಾಣುವ ರಸ್ತೆಗೆ ಬಂದು ಸೇರುತ್ತದೆ ಎಂದರೆ ಸರಿ. ನಿಡಿ-1 ರ ಮತ್ತು ನಿಡಿ-2 ರ ಭಾವ ಚಿತ್ರಗಳಲ್ಲಿ ಕಾಣುವ ರಸ್ತೆಗಳ ಇಕ್ಕೆಲೆಗಳಲ್ಲಿ ಯುಜಿಡಿ(ಚರಂಡಿ) ನಿರ್ಮಿಸಲಾಗಿದೆ ಎಂದರೆ ಸರಿ. ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ನಿಡಿ-3 ರಲ್ಲಿ ಕಾಣುವ ಕೆಂಪು ಬಣ್ಣದ ಮನೆಯು ನಮ್ಮದಾಗಿರುತ್ತದೆ. ಸಾಕ್ಷಿದಾರರಿಗೆ ಮತ್ತೊಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು. ನಮ್ಮ ಮನೆ, 5 ನೇ ವಾದಿಯ ಮನೆ ಮತ್ತು ಸುರೇಶ್ ರವರ ಮನೆ ಹಾಗೂ ಸದರಿ ಮನೆಯ ಮಧ್ಯೆ ಇರುವ ರಸ್ತೆಯು ಬೈರಾಪುರ ಗ್ರಾಮದ ಸರ್ವೆ ನಂಬರ್ 83/2 ಬಿ ರಲ್ಲಿ ಬರುತ್ತವೆ ಎಂದರೆ ಸರಿ.

ಸರ್ವೆ ನಂಬರ್ 83/2 ಬಿ ನಲ್ಲಿ 30 ಗುಂಟೆ ಜಮೀನನ್ನು ನನ್ನ ತಾತ ಕೃಷ್ಣ ನಾಯಕ, 2 ನೇ ವಾದಿ ಮತ್ತು 2 ನೇ ವಾದಿಯ ಸಹೋದರ ಮಲ್ಲೇಶ್ ರವರು ಪ್ರತಿವಾದಿಗೆ ದಿನಾಂಕ 12.07.1984 ರ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ 2 ನೇ ವಾದಿಯು ತಮ್ಮ ಪರವಾಗಿ ಮತ್ತು ತಮ್ಮ ಮೈನರ್ ಮಕ್ಕಳ ಪರವಾಗಿಯು ಸದರಿ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 30 ಗುಂಟೆ ವಿಸ್ತೀರ್ಣದ ಜಮೀನನ್ನು ಪ್ರತಿವಾದಿಯು ಅನ್ಯಕ್ರಾಂತ ಮಾಡಿಸಿ ಸದರಿ ಜಮೀನಿನ ಮಧ್ಯೆ ರಸ್ತೆ ಬಿಟ್ಟು ನಿವೇಶನಗಳನ್ನು ವಿಂಗಡಿಸಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿಯು ಮನೆಯನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿದಾರರಿಗೆ ಮತ್ತೊಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಭಾವ ಚಿತ್ರವನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರ ಭಾವ

**OS-18/2018**
**PW-1**

ಚಿತ್ರದಲ್ಲಿ ಕಾಣುವ ರಸ್ತೆಯು ಪ್ರತಿವಾದಿಯು ತಮ್ಮ 30 ಗುಂಟೆ ಜಮೀನಿನಲ್ಲಿ ಬಿಟ್ಟಿರುವ ರಸ್ತೆ ಎಂದರೆ ಸಾಕ್ಷಿದಾರರು ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ಬೀದಿ ದೀಪದ ಕಂಬದವರೆಗೂ ಇರುವ ರಸ್ತೆ ಮಾತ್ರ ಸದರಿ 30 ಗುಂಟೆ ಜಮೀನಿನಲ್ಲಿ ಬಿಟ್ಟಿರುವ ರಸ್ತೆ ಎಂದು ನುಡಿಯುತ್ತಾರೆ. ನಿಡಿ-5 ರಲ್ಲಿ ಕಾಣುವ ಬೀದಿ ದೀಪದ ಕಂಬದ ನಂತರ ಇರುವ ರಸ್ತೆಗೆ ಸೇರಿಸಿ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ